# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.

ದಿನಾಂಕ:04-12-2021 ರಂದು ಮಧ್ಯಾಹ್ನ 2.30 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:03 ರಲ್ಲಿ ಮಾನ್ಯ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 1 | ಶ್ರೀ.ಶಿವೇಗೌಡ | ಉಪ ಆಯುಕ್ತರು,<br>ಆರ್.ಆರ್.ನಗರ<br>(ನೋಡಲ್ ಆಫೀಸರ್) |
| 2 | ಶ್ರೀ.ಬಿ.ಎಸ್.ರಾಮಕೃಷ್ಣಯ್ಯ | ಸಹಾಯಕ ಅಭಿಯಂತರರು,<br>ವಾರ್ಡ್ ಕಮಿಟಿ ಕಾರ್ಯದರ್ಶಿ |
| 3 | ಶ್ರೀ.ಆನಂದ್ | ಬೆಸ್ಕಾಂ,<br>ಸಹಾಯಕ ಅಭಿಯಂತರರು |
| 4 | ಶ್ರೀಮತಿ.ಚಂದ್ರಿಕ | ಕಿರಿಯ ಆರೋಗ್ಯ ಪರಿವೀಕ್ಷಕರು |

ದಿನಾಂಕ:04-12-2021 ರಂದು ಮಧ್ಯಾಹ್ನ 02.30 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ವಾರ್ಡ್ ನಂ:03, ಅಟ್ಟೂರು ವಾರ್ಡ್ ನೋಡಲ್ ಅಧಿಕಾರಿಗಳಾದ ಶ್ರೀ.ಶಿವೇಗೌಡ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ನಂ:03, ಅಟ್ಟೂರು ವ್ಯಾಪ್ತಿಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ದಿಯ ಸಂಘದ ಪ್ರತಿನಿಧಿಗಳೊಂದಿಗೆ ನಡೆಸಿದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | ಸರ್ದಾರ್‌ವಲ್ಲಭಬಾಯಿ ಪಟೇಲ್ ಪಾರ್ಕ್‌ನಲ್ಲಿ ಟಾಯ್ಲೆಟ್ ಇಲ್ಲದೇ ಇರುವ ಬಗ್ಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ,<br>ಯಲಹಂಕ ಉಪನಗರ ಉಪವಿಭಾಗ,<br>ಬಿ.ಬಿ.ಎಂ.ಪಿ |
| 2 | ಕಾವೇರಿ ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ಕಾಮಗಾರಿಯ ಪೂರ್ಣಗೊಂಡ ನಂತರ ಸಮರ್ಪಕವಾಗಿ ಮಟ್ಟ ಮಾಡದೇ ಇರುವುದರಿಂದ ಅಲ್ಲಲ್ಲಿ ಗುಂಡಿಗಳು ಉಂಟಾಗಿ, ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗಿದ್ದು, ಮಕ್ಕಳು ಹಾಗೂ ವಯಸ್ಸಾದವರಿಗೆ ಓಡಾಡಲು ಕಷ್ಟಕರವಾಗಿದೆ ಎಂಬುದಾಗಿ ಅಲ್ಲಿಯ ರಸ್ತೆಯ ನಿವಾಸಿಗಳು ತಿಳಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ,<br>ಯಲಹಂಕ ಉಪನಗರ ಉಪವಿಭಾಗ,<br>ಬಿ.ಬಿ.ಎಂ.ಪಿ |

| | | | |
|---|---|---|---|
| 3 | ಅಟ್ಟೂರು ಗ್ರಂಥಾಲಯದ ಕಟ್ಟಡವು ಬಿ.ಬಿ.ಎಂ.ಪಿ ವ್ಯಾಪ್ತಿಗೆ ಒಳಪಟ್ಟಿದ್ದು, ಮಳೆ ಬಂದಾಗ ನೀರು ಸೋರುತ್ತದೆ ಗೋಡೆಯು ಬೀಳುವ ಸಂಭವವಿದ್ದು, ಗ್ರಂಥಾಲಯದಲ್ಲಿ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲು ಕಷ್ಟಕರವಾಗುತ್ತಿದೆ ಎಂದು ಶ್ರೀ.ನಾಗಪ್ಪ ರವರು ದೂರನ್ನು ಸಲ್ಲಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 4 | ಯಲಹಂಕ ಉಪನಗರ ಹಿರಿಯ ನಾಗರೀಕರ ವೇದಿಕೆ ರವರು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಇಡಲು ಸಲಕರಣೆಗಳು ಅಗತ್ಯವಿರುತ್ತದೆ ಎಂದು ವೇದಿಕೆಯ ಸದಸ್ಯರು ಕೋರಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 5 | ಎಸ್.ಎಫ್.ಎಸ್ 407 ನಲ್ಲಿ ಡ್ರೈನೇಜ್ ಕೆಲಸ ಮುಗಿಯದೇ ಇರುವ ಬಗ್ಗೆ ರಸ್ತೆಯನ್ನು ಅಗೆದು ಕಲ್ವರ್ಟ್ ಕಾಮಗಾರಿಯನ್ನು ನಿರ್ವಹಿಸದೇ ಇರುವ ಬಗ್ಗೆ ಹಾಗೂ ಕರ್ಬ್ ಸ್ಟೋನ್‌ನ್ನು ಹಾಕದೇ ಇರುವ ಬಗ್ಗೆ ಶ್ರೀ.ರಾಮನ್ ರವರು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 6 | 407 ಎಸ್.ಎಫ್.ಎಸ್ 3ನೇ ಎ ಮುಖ್ಯರಸ್ತೆಯ ಕಾರ್ ಗ್ಯಾರೇಜ್ ಎದುರು ರಸ್ತೆಯಲ್ಲಿ ಕಸದ ರಾಶಿ ಬಿದ್ದಿರುವ ಬಗ್ಗೆ ತಿಳಿಸಿದರು. | ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. | ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಕೋಶ, ಯಲಹಂಕ ಉಪನಗರ,ಬಿ.ಬಿ.ಎಂ.ಪಿ |
| 7 | 407 ಎಸ್.ಎಫ್.ಎಸ್.ನಲ್ಲಿ ಎಲ್.ಎನ್ ರೆಡ್ಡಿ ಗುತ್ತಿಗೆದಾರ ವಾರ್ಡ್ ನಂ:03 ರಲ್ಲಿ ಸರಿಯಾಗಿ ಕೆಲಸ ನಿರ್ವಹಿಸದೆ ಇರುವ ಬಗ್ಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 8 | ಆಲ್ ಇಂಡಿಯಾ ರೇಡಿಯೋ ಕ್ವಾಟ್ರಸ್‌ನ ರಸ್ತೆಯಲ್ಲಿ ಡ್ರೈನೇಜ್ ಕೆಲಸ ಮಾಡುವಾಗ ಮಣ್ಣನ್ನು ತೆಗೆದು ರಸ್ತೆಗೆ ಹಾಕಿರುತ್ತಾರೆ ಹಾಗೂ ಸದರಿ ಮಣ್ಣನ್ನು ಪೂರ್ಣವಾಗಿ ತೆಗೆದಿರುವುದಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗುತ್ತಿರುವುದಾಗಿ ವಿಶ್ವಸೇನಾಜೈನ್ ರವರು ತಿಳಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 9 | ಎ.ಎಂ.ಎಸ್ ಬಡಾವಣೆಯ ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ರವರು ಕಾಮಗಾರಿ ಮಾಡಿರುವುದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದಿದ್ದು, ಬಸ್ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುವುದಾಗಿ ಶ್ರೀ.ಸುರೇಶ್‌ಕುಮಾರ್ ರವರು ತಿಳಿಸಿರುತ್ತಾರೆ. | ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ಯಲಹಂಕ ವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಕಾ.ಪಾ.ಅ, ರಸ್ತೆ ಮೂಲಭೂತ ಸೌಕರ್ಯ, ಬಿ.ಬಿ.ಎಂ.ಪಿ, ಯಲಹಂಕ ವಲಯ ಬೆಂಗಳೂರು |

| | | | |
|---|---|---|---|
| 10 | 407 ಎಸ್.ಎಫ್.ಎಸ್.ನ ಮುಖ್ಯ ರಸ್ತೆಯಲ್ಲಿ ಯು.ಜಿ.ಡಿ.ಯು ಪೂರ್ತಿಯಾಗಿ ಬ್ಲಾಕ್ ಆಗುತ್ತಿರುವ ಬಗ್ಗೆ ಹಾಗೂ ಹೊಸದಾಗಿ ಪೈಪ್‌ಲೈನ್ ಹಾಕುವ ಬಗ್ಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಬಿ.ಡಬ್ಲ್ಯು.ಎಸ್.ಎಸ್.ಬಿ, ಯಲಹಂಕ ಬಿ.ಬಿ.ಎಂ.ಪಿ |
| 11 | ಕೃಷ್ಣ ಆಯಿಲ್ ಮಿಲ್ ಬ್ಲಾಕ್ ಸಂಗೊಳ್ಳಿ ರಾಯಣ್ಣ ಪಾರ್ಕ್‌ನ ಸುತ್ತಲೂ ವಿದ್ಯುತ್ ದೀಪ ಇಲ್ಲದೇ ಇರುವ ಬಗ್ಗೆ ತಿಳಿಸಿದರು. | ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್ ರವರಿಗೆ ಸೂಕ್ತ ಕ್ರಮಕೈಗೊಳ್ಳುವುದಾಗಿ | ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್, ಯಲಹಂಕ ಬಿ.ಬಿ.ಎಂ.ಪಿ |
| 12 | ಕೃಷ್ಣ ಆಯಿಲ್ ಮಿಲ್ ಬ್ಲಾಕ್ ಸಂಗೊಳ್ಳಿ ರಾಯಣ್ಣ ಪಾರ್ಕ್ ಸುತ್ತಮುತ್ತಲೂ ರಸ್ತೆಗಳು ಹಾಳಾಗಿದ್ದು, ಕಸದ ಗಾಡಿಗಳು ಸಂಚರಿಸಲು ಸಾಧ್ಯವಾಗದೇ ಇರುವ ಕಾರಣ ರಸ್ತೆಯನ್ನು ಸರಿಪಡಿಸಿಕೊಡಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 13 | 707 ಸಿ.ಹೆಚ್.ಎಸ್ ಸರ್ಕಾರಿ ಶಾಲೆಯಿಂದ ಗಣೇಶನ ದೇವಸ್ಥಾನದ ವರೆವಿಗೂ ಡ್ರೈನೇಜ್ ಕಾಮಗಾರಿಯನ್ನು ನಿರ್ವಹಿಸಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |
| 14 | 4ನೇ ಹಂತದ ಸರ್ಕಾರಿ ಶಾಲೆಯ ಬಳಿ ಕ್ರಾಸ್ ರಸ್ತೆಗಳಲ್ಲಿ ಸ್ಟ್ರೀಟ್ ಲೈಟ್ ಇಲ್ಲದೇ ಇರುವ ಬಗ್ಗೆ ತಿಳಿಸಿದರು. | ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್ ರವರಿಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಯಿತು. | ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್, ಯಲಹಂಕ ಬಿ.ಬಿ.ಎಂ.ಪಿ |
| 15 | 707 ಎಸ್.ಎಫ್.ಎಸ್ ಸರ್ಕಾರಿ ಶಾಲೆ ಪಕ್ಕದಲ್ಲಿರುವ ಲೈಬ್ರರಿ ಇದ್ದು, ಇತ್ತೀಚಿನ ದಿನಗಳಲ್ಲಿ 2ನೇ ವಾರ್ಡ್‌ಗೆ ವರ್ಗಾಯಿಸಿದ್ದು, 20 ವರ್ಷಗಳಿಂದ 4ನೇ ಹಂತದಲ್ಲಿ ಇರುವ ಲೈಬ್ರರಿಯ ಕಟ್ಟಡವನ್ನು ಶಿಥಿಲಾವಸ್ಥೆಯಲ್ಲಿದ್ದು, ಸರಿಮಾಡಿಸಿ ಲೈಬ್ರರಿಯನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮತ್ತು ಲೈಬ್ರರಿಯನ್ನು ಚಾಲನೆ ಮಾಡುವುದಕ್ಕೆ ಸೂಕ್ತ ಕ್ರಮತೆಗೆದು ಕೊಳ್ಳುವುದು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಸ.ಕಾ.ಅ, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ |

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ:03, ಅಟ್ಟೂರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-
1) ಮಾನ್ಯ ಜಂಟಿ ಆಯುಕ್ತರು ಬಿ.ಬಿ.ಎಂ.ಪಿ, ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.

3) ನೋಡಲ್ ಅಧಿಕಾರಿ, ವಾರ್ಡ್ ನಂ:03, ಅಟ್ಟೂರು, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ / ಯೋಜನಾ ವಿಭಾಗ / ರಸ್ತೆ ಮೂಲಭೂತ ಸೌಕರ್ಯ / ಕೆರೆ ಅಭಿವೃದ್ಧಿ / ಎಲೆಕ್ಟ್ರಿಕಲ್ ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಕೋಶ, ವಾರ್ಡ್ ನಂ:03 ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ರಮಕ್ಕಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ / ಬಿ.ಡಬ್ಲ್ಯು.ಎಸ್.ಎಸ್.ಬಿ ಯಲಹಂಕ ಉಪನಗರ ರವರಿಗೆ ಸೂಕ್ತ ಕ್ರಮಕ್ಕಾಗಿ.
8) ಆರಕ್ಷಕ ವೃತ್ತ ನಿರೀಕ್ಷಕರು, ಯಲಹಂಕ ಸಂಚಾರಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಸಲ್ಲಿಸಿದೆ.
9) ಸಹಾಯಕ ಕಂದಾಯ ಅಧಿಕಾರಿ, ಯಲಹಂಕ ಉಪನಗರ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
10) ಕಛೇರಿ ಕಡತಕ್ಕೆ.

(SWM) 06/12/21

O/C

ಸಂಖ್ಯೆ Recd
ದಿನಾಂಕ 06/12/2021

(C.E.) 6/12/21

Recd one copy 6/12/2021

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಸಂಖ್ಯೆ
ದಿನಾಂಕ 6/12/21
ಯಲಹಂಕ, ಬೆಂಗಳೂರು-64
ಬಿ.ಬಿ.ಎಂ., ಉಪವಿಭಾಗ